



ಸತ್ಯಾಗ್ರಹ ನಿರತ ಗಾಂಧಿ ಚಿತ್ರದೊಂದಿಗೆ ಲೇಖಕಿ

ಪ್ರಮುಖವಾಗಿ ತೋರಿಸುವ ಸಾಕ್ಷ್ಯಚಿತ್ರ ಪ್ರದರ್ಶನ ನಿರಂತರವಾಗಿ ಇರುತ್ತದೆ.

ತೈಲಚಿತ್ರಗಳ ಸಂಗ್ರಹಾಲಯದಲ್ಲಿ 18-1-1948 ರಂದು ಗಾಂಧೀಜಿಯವರು ರಾಷ್ಟ್ರೀಯ ಪ್ರತಿಜ್ಞೆಯೊಂದಿಗೆ ತಮ್ಮ ಕೊನೆಯ ಉಪವಾಸವನ್ನು ಅಂತ್ಯಗೊಳಿಸಿದ ಬೃಹತ್ ಚಿತ್ರ, ಸತ್ಯ ಅಹಿಂಸೆಯ ಕುರಿತು ಭಾಷಣ ಮಾಡುತ್ತಿರುವ ಚಿತ್ರ, ಅಸ್ಪೃಶ್ಯತಾ ನಿವಾರಣೆಗೆ ಸಂಬಂಧಿಸಿದಂತೆ ಅಸ್ಪೃಶ್ಯರ ಮದುವೆಯೊಂದರಲ್ಲಿ ಭಾಗವಹಿಸಿದ ಚಿತ್ರ ಮುಂತಾದವು ಇವೆ.

ಸಾವಿರಾರು ಕಿಲೋಮೀಟರುಗಳ ನೈಸರ್ಗಿಕ ಕಡಲ ತೀರ ಹೊಂದಿರುವ ಭಾರತಕ್ಕೆ ಉಪ್ಪಿನ ತಯಾರಿಕೆಗೂ ನಿರ್ಬಂಧ ವಿಧಿಸಿದ್ದ ಬ್ರಿಟಿಷರ ದಮನಕಾರಿ ನೀತಿ ಪ್ರತಿಭಟಿಸಿ ದಂಡಿಯಾತ್ರೆಗಾಗಿ 241ಕಿ.ಮೀ.ದೂರದ ದಂಡಿಗೆ ಆಯ್ದ ಎಪ್ಪತ್ತೆಂಟು ಮಂದಿ ಅನುಯಾಯಿಗಳೊಂದಿಗೆ ಗಾಂಧೀಜಿಯವರು ಪಾದಯಾತ್ರೆ ಹೊರಟಿದ್ದನ್ನು ಇಡೀ ವಿಶ್ವವೇ ಬೆರಗಿನಿಂದ ವೀಕ್ಷಿಸಿತ್ತು. ಈ ಸನ್ನಿವೇಶದ ಹೃದಯಸ್ಪರ್ಶಿ ಚಿತ್ರ ಮನ ಮಿಡಿಯುತ್ತದೆ. ದಂಡಿಯಲ್ಲಿ ಗಾಂಧೀಜಿಯವರು ಸಮುದ್ರ ತೀರದಲ್ಲಿ ಹಿಡಿ ಉಪ್ಪನ್ನು ಎತ್ತಿ ಹಿಡಿದು ಬ್ರಿಟಿಷರ ಕಾನೂನು ಭಂಗ ಮಾಡಿ, ಪ್ರಭುತ್ವದ ನ್ಯಾಯಬಾಹಿರ ಕಾನೂನನ್ನು ಉಲ್ಲಂಘಿಸಬಲ್ಲ ಭಾರತೀಯರ ಸಂಕಲ್ಪಶಕ್ತಿಯನ್ನು ಸಾಬೀತುಗೊಳಿಸಿದ ಚಿತ್ರಣವು ಇಲ್ಲಿನ ಬೃಹತ್ ಗಾಜಿನ ಮಂಟಪದಲ್ಲಿ ಪ್ರದರ್ಶಿತವಾಗಿದೆ.

ಇಲ್ಲಿನ ಗ್ರಂಥಾಲಯದಲ್ಲಿ ಗಾಂಧೀಜಿಯವರ ಜೀವನ, ಬೋಧನೆ, ಸಾಧನೆಗಳು, ಸ್ವಾತಂತ್ರ್ಯ ಚಳುವಳಿಗೆ ಸಂಬಂಧಿಸಿದ ಮೂವತ್ತೈದು ಸಾವಿರಕ್ಕೂ ಮಿಕ್ಕಿದ ಹಸ್ತಪ್ರತಿಗಳಿವೆ. ಇಂಗ್ಲಿಷ್, ಹಿಂದಿ, ಗುಜರಾತಿ ಭಾಷೆಯ ಪತ್ರಿಕೆಗಳಿವೆ.

## ಆಶ್ರಮದಲ್ಲಿ ವಿರೋಧ

ಅಸ್ಪೃಶ್ಯತೆಯ ಬಗ್ಗೆ ನೊಂದುಕೊಂಡು ಅದು ಭಾರತೀಯ ಸಮಾಜಕ್ಕೆ ಒಂದು ಕಳಂಕ ಎನ್ನುತ್ತಿದ್ದ ಗಾಂಧೀಜಿ, ಸಬರಮತಿ ಆಶ್ರಮದಲ್ಲಿ ಒಂದು ಅಸ್ಪೃಶ್ಯ ಕುಟುಂಬವನ್ನು ಸೇರಿಸಿಕೊಂಡರು. ಸಂಪ್ರದಾಯಸ್ಥರೆಲ್ಲ ಆಘಾತಗೊಂಡರು. ಕಸ್ತೂರಿಬಾ ಕೂಡ ಇದನ್ನು ವಿರೋಧಿಸಿದರು. ಆಶ್ರಮ ನಡೆಸಲು ಉದಾರವಾಗಿ ಹರಿದು ಬರುತ್ತಿದ್ದ ದೇಣಿಗೆಗಳೆಲ್ಲ ಒಮ್ಮೆಲೇ ಸ್ಥಗಿತಗೊಂಡವು. ಗಾಂಧೀಜಿ ಮಾತ್ರ ಧೃತಿಗೆಡಲಿಲ್ಲ. ಕ್ರಮೇಣ ಆರ್ಥಿಕ ನೆರವಿಲ್ಲದೆ ಆಶ್ರಮ ಮುಚ್ಚುವ ಸ್ಥಿತಿ ಬಂತು. ಆಗ ಇವರ ಅನಾಮಧೇಯ ಅಭಿಮಾನಿಯೊಬ್ಬ ದೊಡ್ಡ ಮೊತ್ತದ ದೇಣಿಗೆಯೊಂದನ್ನು ನೀಡಿದಾಗ ಪರಿಸ್ಥಿತಿ ಸುಧಾರಿಸಿತ್ತು. ಕ್ರಮೇಣ ಹಲವರ ನೆರವು ದೊರೆಯಲಾರಂಭಿಸಿತು.

